ಕರ್ನಾಟಕ ಸರ್ಕಾರದ ನಡವಳಿಕೆಗಳು:

ವಿಷಯ : ರಾಜ್ಯದಲ್ಲಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ -2011 (SECC-2011) ನಡೆಸಲು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶದ ಸಮ ಸಂಖ್ಯೆ ಗ್ರಾಅಪ:17-10-2011 ಮತ್ತು 23-05-2012.

2) ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಇವರ ಪತ್ರದ ಸಂಖ್ಯೆ: ರಾಜಿಕಾ/ಜಾತಿಗಣತಿ/ಸಿಆರ್/01/2013-14, ದಿನಾಂಕ: 16-02-2014.

*****

ಪ್ರಸ್ತಾವನೆ:

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ - 2011 (SECC-2011) ನಡೆಸಲು ತೀರ್ಮಾನಿಸಿದೆ. ಓದಲಾಗಿದೆ (1) ರ ದಿನಾಂಕ:17-10-2011 ಮತ್ತು ದಿನಾಂಕ:23-05-2012 ರನ್ವಯ ರಾಮನಗರ ಜಿಲ್ಲೆಗೆ ಅಂದಾಜಿಸಿದ ಒಟ್ಟು ಅನುದಾನ ₹207.61 ಲಕ್ಷ ಗಳ ಪೈಕಿ ಶೇಕಡ 90 ರಷ್ಟು ಅನುದಾನ ₹186.85 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ SECC-2011 ಅಧಿಕಾರಿಗಳಿಗೆ ಬಿಡುಗಡೆಗೊಳಿಸಿದೆ. ಓದಲಾಗಿದೆ (2) ರಲ್ಲಿ ತಾವು ಗಣತಿ ಕಾರ್ಯಕ್ಕೆ ಬಾಕಿ ಅನುದಾನ ₹6.65 ಲಕ್ಷಗಳನ್ನು ಕೋರಿರುತ್ತೀರಿ. ಆದರೆ, ರಾಜ್ಯ ಸರ್ಕಾರದಲ್ಲಿ ಅನುದಾನದ ಲಭ್ಯತೆ ಕಡಿಮೆ ಇರುವ ಕಾರಣ ಕರಡು ಗಣತಿ ಪಟ್ಟಿ ಮುದ್ರಣದ ವೆಚ್ಚ ಮತ್ತು ಇತರೆ ವೆಚ್ಚಗಳಿಗೆ ₹5.00ಲಕ್ಷಗಳನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಆದಕಾರಣ ₹5.00ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 11 ಎಸ್‌ಜೆವೈ 2014
ಬೆಂಗಳೂರು, ದಿನಾಂಕ: 12-05-2014

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಜ್ಯ ಸರ್ಕಾರವು ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ - 2011 (SECC-2011) ನಡೆಸಲು ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ SECC-2011 ಅಧಿಕಾರಿಗಳಿಗೆ ₹5.00ಲಕ್ಷಗಳ (₹ಐದು ಲಕ್ಷಗಳು ಮಾತ್ರ) ಅನುದಾನವನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಿ ಬಿಡುಗಡೆ ಮಾಡಿದೆ.

ಷರತ್ತುಗಳು:

- ಅನುದಾನವನ್ನು ರಾಜ್ಯ ಮಟ್ಟದಲ್ಲಿ ತೆರೆದಿರುವ State Bank of Mysore, G SEVA Branch, ನಲ್ಲಿ ತೆರೆದಿರುವ ಬ್ಯಾಂಕ್ ಖಾತೆ ನಂ. 64084063002 ಯಿಂದ ಪ್ರಧಾನ SECC-2011 ರ ಅಧಿಕಾರಿಗಳು ತೆರೆದಿರುವ ರಾಮನಗರ ಜಿಲ್ಲೆಯ ಎಸ್‌ಬಿಎಂ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು. ವಿವರ ಕೆಳಕಂಡಂತಿದೆ.

ಬ್ಯಾಂಕ್ ಹೆಸರು: ಸ್ಟೇಟ್ ಬ್ಯಾಂಕ್ ಆಫ್ ಮೈಸೂರು,
S.B. ಖಾತೆ ಸಂಖ್ಯೆ: 64085310473,
IFSC Code : SBMY 0040031
ಬ್ಯಾಂಕ್ ಕೋಡ್ : 40031
ಬ್ರಾಂಚ್ ವಿಳಾಸ: ರಾಮನಗರ ಬ್ರಾಂಚ್, ರಾಮನಗರ.

- ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ-2011 ಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿಯಂತೆಯೇ ಅನುದಾನವನ್ನು ಉಪಯೋಗಿಸತಕ್ಕದ್ದು. ಈ ಅನುದಾನವನ್ನು ಕರಡು ಪಟ್ಟಿ ಮುದ್ರಣದ ಬಿಲ್ ಪಾವತಿಗಾಗಿ ಮಾತ್ರ ಬಳಸಿ ಉಳಿದ ಹಣವನ್ನು ಇತರೆ ಉದ್ದೇಶಗಳಿಗೆ ಬಳಸುವುದು.

- ಗಣತಿಗಾಗಿ ಬಿಡುಗಡೆ ಮಾಡಿದ ಅನುದಾನವನ್ನು ಬೇರೆ ಯಾವ ಉದ್ದೇಶಗಳಿಗೂ ಬಳಸಬಾರದು. ಕೇಂದ್ರ ಮತ್ತು ರಾಜ್ಯ ಸಕಾರಗಳು ಆಗಿಂದಾಗ್ಗೆ ನೀಡುವ ಸೂಚನೆಗಳನ್ವಯ ವೆಚ್ಚ ಮಾಡುವುದು.
- ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ ಎಸ್‌ಇಸಿಸಿ-2011 ಅಧಿಕಾರಿಗಳು ಬಿಡುಗಡೆಗೊಳಿಸಿದ ಅನುದಾನಕ್ಕೆ ಉಪಯೋಗ ಪ್ರಮಾಣ ಪತ್ರವನ್ನು ರಾಜ್ಯದ ಎಸ್‌ಇಸಿಸಿ-2011 ನೋಡಲ್ ಅಧಿಕಾರಿಯಾದ ನಿರ್ದೇಶಕರು (ಇ-ಆಡಳಿತ) ಮತ್ತು ಸ್ವಉಕಾ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ರೋಹಿಣಿ ಸಿಂಧೂರಿ)
ನಿರ್ದೇಶಕರು ಇ-ಆಡಳಿತ ಮತ್ತು ಸ್ವಉಕಾ ಹಾಗೂ
ಪ.ನಿ. ಸರ್ಕಾರ ಉಪ ಕಾರ್ಯದರ್ಶಿ ಮತ್ತು
ರಾಜ್ಯದ ನೋಡಲ್ ಅಧಿಕಾರಿ, ಎಸ್‌ಇಸಿಸಿ-2011
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ ಎಸ್‌ಇಸಿಸಿ-2011 ಅಧಿಕಾರಿಗಳು, ರಾಮನಗರ ಜಿಲ್ಲೆ.
3. ಸಹಾಯಕ ಜನರಲ್ ಮ್ಯಾನೇಜರ್, ಎಸ್‌ಬಿಎಂ, ಜಿ.ಸೇವಾ ಬ್ರಾಂಚ್, ನಂ.2 ಲೇಡಿ ಕರ್ಜನ್ ರಸ್ತೆ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
5. ಸರ್ಕಾರದ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
6. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
8. ಗಣಕ ಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
9. ನಿರ್ದೇಶಕರು (ಸ್ವ ಉಕಾ), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರಿಗೆ.
10. ಶಾಖಾಧಿಕಾರಿ, ಸ್ವಉಕಾ ಶಾಖೆ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
11. ಶಾಖಾಧಿಕಾರಿಗಳು, ಪತ್ರ ಸ್ವೀಕಾರ ಮತ್ತು ರವಾನೆ ಶಾಖೆ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ/ಹೆಚ್ಚಿನ ಪ್ರತಿ